ಕರ್ನಾಟಕ ಸರ್ಕಾರ
ಮಕ್ಕಳ ರಕ್ಷಣಾ ನಿರ್ದೇಶನಾಲಯ
C/o, ನಿರ್ದೇಶನಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಒಂದನೇ ಮಹಡಿ,
ಬಹು ಮಹಡಿಗಳ ಕಟ್ಟಡ, ಡಾ॥ ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು.

e-mail Id:Icps.kar@gmail.com Ph:080-22879381/82/83

ಸಂಖ್ಯೆ:ಮರನಿ/ಆಡಳಿತ/ಜಿ.ಮ.ರ/ಆಶಾಅ/143/2020-21 ದಿನಾಂಕ:04-11-2020

ಜಿಲ್ಲಾಧಿಕಾರಿಗಳು,
ಎಲ್ಲಾ 26 ಜಿಲ್ಲೆಗಳು.

ಮಾನ್ಯರೆ,

ವಿಷಯ:ಖಾಲಿ ಇದ್ದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಹುದ್ದೆಗಳನ್ನು ನಿವೃತ್ತ ಅಧಿಕಾರಿಗಳ ಮೂಲಕ ತುಂಬುವ ಬಗ್ಗೆ.

ಉಲ್ಲೇಖ:1)ಸರ್ಕಾರಿ ಆದೇಶ ಸಂಖ್ಯೆ:ಮಮಅಇ 255 ಮಭಾಬ 2016 ದಿ:28-06-2019.
2)ಸರ್ಕಾರಿ ಆದೇಶ ಸಂಖ್ಯೆ:ಮಮಅಇ 255 ಮಭಾಬ 2016 ದಿ:06-09-2019.

*****

ಕರ್ನಾಟಕ ರಾಜ್ಯದಲ್ಲಿ 26 ಜಿಲ್ಲೆಗಳಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಹುದ್ದೆಗಳು ಖಾಲಿ ಇದ್ದು, ಇವುಗಳನ್ನೆಲ್ಲಾ ನಿವೃತ್ತ ಅಧಿಕಾರಿಗಳ ಮುಖಾಂತರ ಸಂಚಿತ ವೇತನದ ಮೇಲೆ ಭರ್ತಿ ಮಾಡಿಕೊಳ್ಳಲು ಉಲ್ಲೇಖದಂತೆ ಆದೇಶಗಳನ್ನು ಹೊರಡಿಸಲಾಗಿದೆ. ಸದರಿ 26 ಜಿಲ್ಲೆಗಳಲ್ಲಿ ಪ್ರಸ್ತುತ ನವೆಂಬರ್ ತಿಂಗಳಲ್ಲಿ 4 ಜಿಲ್ಲೆಗಳಲ್ಲಿ ಸದರಿ ನಿವೃತ್ತ ಅಧಿಕಾರಿಗಳ ಒಂದು ವರ್ಷದ ಕಾಲಾವಧಿ ಮುಕ್ತಾಯವಾಗಲಿದ್ದು, ಈ ಕುರಿತು ಆಯಾ ಜಿಲ್ಲಾಧಿಕಾರಿಗಳು ಕಾಲಕಾಲಕ್ಕೆ ಕೆಳಕಂಡಂತೆ ಕ್ರಮ ಕೈಗೊಳ್ಳಲು ಕೋರಲಾಗಿದೆ.

1. ಜಿಲ್ಲೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಾಗಲೀ ಅಥವಾ ಬೇರೆ ಯಾವುದೇ ಇಲಾಖೆಯಲ್ಲಾಗಲೀ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಹುದ್ದೆಯ ಕರ್ತವ್ಯಗಳನ್ನು ಒಳ್ಳೆಯ ಕರ್ತವ್ಯ ಮನೋಭಾವದಿಂದ ನಿರ್ವಹಿಸುವ ಸೂಕ್ತ ಅಧಿಕಾರಿ ಲಭ್ಯವಿದ್ದಾರೆಂದು ಜಿಲ್ಲಾಧಿಕಾರಿಗಳು ಭಾವಿಸಿದಲ್ಲಿ ಸದರಿ ಅಧಿಕಾರಿಗಳಿಗೆ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಹುದ್ದೆಯ ಹೆಚ್ಚುವರಿ ಪ್ರಭಾರವನ್ನು ವಹಿಸಿಕೊಡುವುದು.

2. ಒಂದು ವೇಳೆ ಮೇಲೆ ತಿಳಿಸಿದಂತೆ ಸದರಿ ಹುದ್ದೆಯನ್ನು ಭರ್ತಿ ಮಾಡಲು ಅವಕಾಶ ಇಲ್ಲದಿದ್ದಲ್ಲಿ ಉಲ್ಲೇಖದ ಸರ್ಕಾರದ ಆದೇಶಗಳಲ್ಲಿ ಈಗಾಗಲೇ ಅನುಮತಿ ನೀಡಿದಂತೆ ಹುದ್ದೆಗಳನ್ನು ನಿವೃತ್ತ ಅಧಿಕಾರಿಗಳ ಮೂಲಕ ಭರ್ತಿ ಮಾಡಿಕೊಳ್ಳಲು ಉಲ್ಲೇಖ(2)ರಂತೆ ಭರ್ತಿ ಪ್ರಕ್ರಿಯೆ ಮತ್ತು ಷರತ್ತುಗಳನ್ನು ಈಗಾಗಲೇ ತಿಳಿಸಲಾಗಿದ್ದು, ಅದರಂತೆ ಭರ್ತಿ ಪ್ರಕ್ರಿಯೆಯನ್ನು ಹೊಸದಾಗಿ ಅರ್ಜಿಗಳನ್ನು ಆಹ್ವಾನಿಸುವ ಮೂಲಕ ಚಾಲನೆಗೊಳಿಸಲು ಕೋರಲಾಗಿದೆ.

ಖಾಲಿ ಇದ್ದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಹುದ್ದೆಗೆ ನಿವೃತ್ತ ಅಧಿಕಾರಿಗಳನ್ನು ಸಂಚಿತ ವೇತನ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಅನ್ವಯವಾಗುವಂತೆ ನೇಮಿಸಿಕೊಳ್ಳಲು ಉಲ್ಲೇಖಿತ ಆದೇಶಗಳಲ್ಲಿ ಅನುಮತಿ ನೀಡಲಾಗಿದೆ. ಪ್ರಸ್ತುತ ಪುನಃ ಒಂದು ವರ್ಷದ ಅವಧಿಗೆ ನಿವೃತ್ತ ಅಧಿಕಾರಿಗಳ ಮೂಲಕ ಖಾಲಿ ಇದ್ದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಸರ್ಕಾರಕ್ಕೆ ಅನುಮತಿಗಾಗಿ ಪತ್ರ ಬರೆಯಲಾಗುತ್ತಿದ್ದು, ಸರ್ಕಾರದಿಂದ ಅನುಮತಿ ಬಂದ ಕೂಡಲೇ

ಪುನಃ ಹೊಸದಾಗಿ ಪಾರದರ್ಶಕ ಆಯ್ಕೆ ಪ್ರಕ್ರಿಯೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ನೀಡಬಹುದಾಗಿದೆ.

ಆದರೆ ಖಾಲಿಯಾಗುವ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಹುದ್ದೆಗಳನ್ನು ನಿವೃತ್ತ ಅಧಿಕಾರಿಗಳಿಂದ ಭರ್ತಿ ಮಾಡಲು ಸರ್ಕಾರದಿಂದ ಉಲ್ಲೇಖ(2)ರಂತೆ ನಿಗಧಿಪಡಿಸಿದ ಹುದ್ದೆ ಭರ್ತಿ ಪ್ರಕ್ರಿಯೆಯನ್ನು ತಕ್ಷಣದಿಂದಲೇ ಚಾಲನೆಗೊಳಿಸುವುದರಿಂದ ಗಮನಾರ್ಹ ಕಾಲಾವಕಾಶವನ್ನು ಪಡೆಯಬಹುದಾಗಿ ರುವುದರಿಂದ ಅದರಂತೆ ಸದರಿ ಪ್ರಕ್ರಿಯೆಯನ್ನು ತಕ್ಷಣದಿಂದಲೇ ಚಾಲನೆಗೊಳಿಸಲು ಕೋರುವಂತೆ ಮಾನ್ಯ ನಿರ್ದೇಶಕರಿಂದ ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

ಯೋಜನಾ ನಿರ್ದೇಶಕರು
ಮಕ್ಕಳ ರಕ್ಷಣಾ ನಿರ್ದೇಶನಾಲಯ,
ಬೆಂಗಳೂರು.